ಪ್ರಮಾಣ ಪತ್ರಕ್ಕೆ ಲಗತ್ತು

ದಿನಾಂಕ**: 29.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಕೆ.ಎ. ವಕೀಲರಿಂದಃ-

ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಸ್ವತ್ತು ಒಟ್ಟು 6 ಎಕರೆ 23 ಗುಂಟೆ ಇರುತ್ತದೆ. ಅದರಲ್ಲಿ ಎ ಖರಾಬು 2 ಎಕರೆ, ಬಿ. ಖರಾಬು 16 ಗುಂಟೆ ಇರುತ್ತದೆ. ಸದರಿ ಖರಾಬು ಎರಡೂ ಕಡೆ ಇರುತ್ತದೆ. ದಕ್ಷಿಣದ ಕಡೆ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ದಾವಾ ಸ್ವತ್ತು ಸುಮಾರು 70 - 80 ವರ್ಷಗಳ ಹಿಂದೆ ನನ್ನ ತಂದೆ ಮತ್ತು ಅವರ ಅಣ್ಣ - ತಮ್ಮಂದಿರ ನಡುವೆ ಮೌಖಿಕ ವಿಭಾಗ ಆಗಿರುತ್ತದೆ. ವಿಭಾಗದಂತೆ ಅವರ ಅವರ ಹೆಸರಿಗೆ ಪಹಣಿ ಆಗಿರುತ್ತದೆ. ನಾನು ಈ ದಾವೆಯನ್ನು 2 ಎಕರೆ 15 ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ನನ್ನ ಚಿಕ್ಕಪ್ಪ ಮಾರಾಟ ಮಾಡಿರುವ 1 ಎಕರೆ ಜಮೀನನ್ನು ಪ್ರಶ್ನಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಮ್ಮ ಭಾಗಕ್ಕೆ ಬಂದಿರು ಜಮೀನನ್ನು ನನ್ನ ಚಿಕ್ಕ ಅವರ ಹೆಸರಿಗೆ ಮಾಡಿಕೊಂಡಿರುವುದಂರಿದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಐಟಂ ನಂ. 1 ರಲ್ಲಿ 1 ಎಕರೆ 24 ಗುಂಟೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿರುತ್ತೇನೆ. ಅದರಲ್ಲಿ ನನ್ನ ಚಿಕ್ಕಪ್ಪ ಮಾರಾಟ ಮಾಡಿರು ಜಮೀನು ಸೇರಿರುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ - ಪ್ರತಿವಾದಿಗಳ ಜಮೀನು ಬರುತ್ತದೆ. ಅದು ನನ್ನ ಚಿಕ್ಕಪ್ಪ ಮಾರಾಟ ಮಾಡಿರುವ ಸ್ವತ್ತು. ದಾವಾ ಐಟಂ ನಂ. 1 ರಲ್ಲಿ ಸರ್ಕಾರಿ ರಸ್ತೆ ಇರುತ್ತದೆ. ಸದರಿ ರಸ್ತೆ ಸುಮಾರು 20 ಅಡಿ ಅಗಲ 500 ಅಡಿ ಆಗಲ ಇರುತ್ತದೆ. ಸದರಿ ರಸ್ತೆ ಪೂರ್ವ -ಪಶ್ಚಿಮವಾಗಿ ಇರುತ್ತದೆ. ದಾವಾ ಐಟಂ . ನದ. 1 ರಲ್ಲಿ ರಸ್ತೆ ಹಾದು ಹೋಗುತ್ತದೆ. ರಸ್ತೆಯನ್ನು ಸೇರಿಸಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ರಸ್ತೆ ಸುಮಾರು 90 ವರ್ಷಗಳಿಂದ ಇರುತ್ತದೆ.

ಪ್ರತಿವಾದಿಗಳು 20 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಒತ್ತುವರಿ ಮಾಡಿಕೊಂಡಿರುವುದನ್ನು ತೋರಿಸಲು ನಕಾಷೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ನಕಾಷೆಯನ್ನು ನಾವೇ ತಾಯಾರಿಸಿರುತ್ತೇವೆ. ಅದನ್ನು ಹೊರತುಪಡಿಸಿ ಬೇರೆ ದಾಖಲೆ ಇಲ್ಲ. ನಕಾಷೆಯನ್ನು ದಾವೆಗಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 1 ಎಕರೆ ಜಮೀನಿನಲ್ಲಿ ವ್ಯವಸಾಯದ ಭೂಮಿ ಮತ್ತು ಪರಿವರ್ತನೆ ಮಾಡಿಕೊಂಡಿರುವ ಜಮೀನು ಇರುತ್ತದೆ. ಪ್ರತಿವಾದಿಗಳು 20 ಗುಂಟೆ ಭೂ ಪರಿವರ್ತನೆ ಮಾಡಿಕೊಂಡಿರುತ್ತಾರೆ. ಬಾರ್ ಆಂಡ್ ರೆಸ್ಟೂರೆಂಟ್ ಅನ್ನು ಮಾಡಿಕೊಂಡಿರುತ್ತಾರೆ,

ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 233/2021 ಮತ್ತು 234/2021 ರಿತ್ಯಾ ದಾವೆ ಸಲ್ಲಿಸಿದ್ದು ಅದನ್ನು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸರಿ. ಬಾರ್ ಆಂಡ್ ರೆಸ್ಟೂರೆಂಟ್ ಅನ್ನು ಲೈಸೆನ್ಸ್ ಅನ್ನು ಪಡೆದುಕೊಂಡಿದ್ದರು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಗಳು ಅಕ್ರಮ ಪ್ರವೇಶ ಮಾಡಿಕೊಂಡಿಲ್ಲ ಮತ್ತು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತುಜೆ.ಎಂ.ಎಫ್.ಸಿ.,
ಬಾಗೇಪಲ್ಲಿ.